ಉಟ್ಟಿದ್ದ ಸೀರೆ ಬದಲಿಸಿ, ಹಾಯಾದ ನೈಟ್ ಗೌನ್ ತೊಟ್ಟು, ಕೈಕಾಲು ತೊಳೆದು ಹಗುರಾಗಿ ಬಂದು ಸೋಫಾದ ಮೇಲೆ ಕೂತಳು ಶ್ರಾವಂತಿ. ದೇಹಕ್ಕೆ ಹಿತವೆನಿಸುತ್ತಿದ್ದರೂ ಮನಸ್ಸಿನೊಳಗೆ ಕಿರಿಕಿರಿ. ಇನ್ನು ಇವನು ಕಿವಿಯಲ್ಲಿ ಗಾಳಿ ಹೊಕ್ಕ ಎಳೆಗರುವಿನಂತಾಗುತ್ತಾನೆ. ಮೊದಲೇ ತಿಂಡಿಪೋತ. ಹಿಂದೆಂದೋ ಹಳ್ಳಿ ಊರಲ್ಲಿದ್ದಾಗ ತಿಂದ ತಿಂಡಿಗಳನ್ನು ನೆನಪಿಸಿಕೊಳ್ಳುತ್ತಾ ಬಸುರಿ ಬಯಕೆ ತೀರಿಸಿಕೊಳ್ಳುವಂತೆ ಎಲ್ಲವನ್ನೂ ತೀರಿಸಿಕೊಳ್ಳುತ್ತಾನೆ. ಅವಳಿಗಾದರೋ ಇವನು ಹೇಳಿದ್ದನ್ನು ಮಾಡಿಕೊಡುವುದೆಂದರೆ ತೀರದ ಹುಮ್ಮಸ್ಸು. ಸಿಟಿಯಲ್ಲಿ ಹುಟ್ಟಿ ಬೆಳೆದ ಶ್ರಾವಂತಿಯ ನಾಲಿಗೆಯಲ್ಲೂ ಹೊರಳದ ತಿಂಡಿಗಳು ಘಮಗುಟ್ಟುತ್ತಾ ಅಡುಗೆಮನೆಯಲ್ಲಿ ತಯಾರಾಗುತ್ತವೆ. ಹಿತ್ತಿಲ ಕಾಂಪೌಂಡಿನುದ್ದಕ್ಕೂ ಬೆಳೆದ ಕೆಸುವಿನೆಲೆಗಳು ಕೇತಕಿ ಬಂದಾಗ ಪತ್ರೊಡೆ, ಚಟ್ನಿ ಇತ್ಯಾದಿ ವ್ಯಂಜನಗಳ ತಯಾರಿಕೆಗೆ. ಅವಳು ಬರುವವರೆಗೆ ಹಣ್ಣಾಗಿ ಉದುರಿ ಬೀಳುವ ಎಲೆಗಳೆಷ್ಟೋ. ಇವನು ಹೊಟ್ಟೆ ಉರಿಸಿಕೊಳ್ಳುತ್ತಾನೆ ಎಂದು ಗೊತ್ತಿದೆ ಶ್ರಾವಂತಿಗೆ. ಮನಸ್ಸು ಮಾಡಿದ್ದರೆ ಹೊಸ ಪಾಕವನ್ನು ಕಲಿಯುವುದು ಬ್ರಹ್ಮವಿದ್ಯೆಯೇನಲ್ಲ. ಮನಸ್ಸು ಮಾಡುವುದಿಲ್ಲ ಶ್ರಾವಂತಿ. ಅಡುಗೆ ಕೆಲಸ ಅಂದರೆ ಅವಳಿಗೆ ಮಾರು ದೂರ. ತಿನ್ನುವ ಚಾಪಲ್ಯದಿಂದ ದೂರ ಉಳಿದವಳಿಗೆ ಅಡುಗೆಮನೆ ಕೂಡಾ ದೂರ. ಅಡುಗೆಗೊಂದು ಜನ ಇಟ್ಟುಕೊಳ್ಳುವುದು ದೊಡ್ಡ ವಿಷಯವೇನಲ್ಲ. ಆತನೋ, ಆಕೆಯೋ ಬೆಳಗಾಗುತ್ತಿದ್ದಂತೆ ಬಂದು ಪಾಕ ಇಳಿಸಿ ಇಟ್ಟು ಹೋಗುವುದನ್ನು ಓವನ್‌ನಲ್ಲಿ ಬಿಸಿ ಮಾಡಿಕೊಂಡು ತಿನ್ನಬೇಕಾದ ಕರ್ಮ ಒಂದು ಕಡೆ. ಮನೆಯವರ ಆರೋಗ್ಯದ ಕುರಿತಾದ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಅವರು ಬಡಿಸಬಹುದಾದ್ದರ ಕುರಿತು ಸಂದೇಹ ಮತ್ತೊಂದು ಕಡೆ. ಇಷ್ಟಿಷ್ಟೇ ಪದಾರ್ಥಗಳನ್ನು ಎಗರಿಸಬಹುದಾದ ಸಂಭವವನ್ನು ನಿವಾರಿಸಿಕೊಳ್ಳಬೇಕಾದ ದರ್ದು ಮಗದೊಂದು ಕಡೆ. ಎಣ್ಣೆ, ತುಪ್ಪಗಳ ಕುರಿತು ಕೈ ಬಿಗಿ ಹಿಡಿಯುವ ಶ್ರಾವಂತಿ ಅನಿವಾರ್ಯವಾಗಿ ಅಡುಗೆ ಕೆಲಸವನ್ನು ತನ್ನ ಸುಪರ್ದಿನಲ್ಲಿಟ್ಟುಕೊಂಡಿದ್ದಾಳೆ. ನಕುಲನ ಸಹಾಯವನ್ನು ಮುಲಾಜಿಲ್ಲದೆ ತೆಗೆದುಕೊಳ್ಳುತ್ತಾಳೆ. ಶಾಸ್ತ್ರಕ್ಕೆ ಎಣ್ಣೆ ತೋರಿಸಿ ಚಪಾತಿ ಬೇಯಿಸುವುದರಲ್ಲಿ ಪರಿಣತನಾಗಿದ್ದಾನೆ ನಕುಲ. ತರಕಾರಿ ಹೆಚ್ಚುವುದು, ಕಾಯಿ ತುರಿಯುವುದು, ಚಟ್ನಿಯ ಲವಾಜಮೆಗಳನ್ನು ಒಗ್ಗೂಡಿಸಿ ಮಿಕ್ಸಿ ಮಾಡುವುದರಲ್ಲಿ ಕೂಡಾ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎನ್ನುವ ನುಡಿಗಟ್ಟು ಅವನ ಬಾಯಿಂದ ಉದುರಿ ಬಿದ್ದರೆ ಕೆರಳುತ್ತಾಳೆ ಶ್ರಾವಂತಿ.

"ನೀನು ಯಾವ ಜಾತಿಯ ಮನುಷ್ಯ ಮಾರಾಯಾ. ನಾಲಿಗೆ ಚಪಲಕ್ಕೆ ಕಡಿವಾಣ ಹಾಕ್ದಿದ್ರೆ ನಲವತ್ತಾಗೋ ಹೊತ್ತಿಗೆ ಕಾಯಿಲೆ ಬಿದ್ದು ಸಾಯ್ತಿ ನೋಡು. ಈಗಾಗ್ಲೇ ಹೊಟ್ಟೆ ಮುಂದೆ ಬಂದು ಎಷ್ಟು ಕೆಟ್ಟದಾಗಿ ಕಾಣ್ತೆ ಗೊತ್ತಾ?" ಭವಿಷ್ಯ ಹೇಳುತ್ತಾಳೆ.

"ಒಳ್ಳು ಅನ್ನೇ. ಸಾಯ್ತಿ ಅನ್ನುವ ಶಾಪ ನಿನ್ನಂತಾ ಗರತಿಯ ಬಾಯಿಂದ ಬರಬಹುದಾ, ಅದೂ ಗಂಡ ಅನ್ನಿಸ್ಕೊಂಡೋನಿಗೆ? ಅಕ್ಕ ಹೇಳ್ತಿದ್ಲು, ವಾಸ್ತುದೇವತೆ ಅಸ್ತು ಅಸ್ತು ಅಂತಿರುತ್ತಂತೆ..."

"ನಿನ್ನ ತಲೆ. ಅದೇನು ಓದಿದೀಯೋ, ಆಫೀಸರ್ ಅನ್ನಿಸ್ಕೊಂಡಿದೀಯೋ, ಬುದ್ಧಿ ಮಾತ್ರಾ ಅರ್ಧ ಶತಮಾನ ಹಿಂದಿನ ಕಾಲದ್ದು..."

ಶ್ರಾವಂತಿ ಹೇಳುತ್ತಿದ್ದಿದ್ದು ಪೂರಾ ಸುಳ್ಳೇನಲ್ಲ. ಎಷ್ಟೇ ಗಡಿಬಿಡಿ ಇದ್ದರೂ ಸ್ನಾನ ಮುಗಿಯುತ್ತಿದ್ದಂತೆ ದೇವರೆದುರು ದೀಪ ಬೆಳಗಿ, ವಿಗ್ರಹಗಳ ಮೇಲಿನ ನಿರ್ಮಾಲ್ಯದ ಹೂಗಳನ್ನು ತೆಗೆದು ಹೊಸ ಹೂವುಗಳನ್ನು ಏರಿಸಿ, ದೇವರೆದುರು ಊದುಕಡ್ಡಿಗಳನ್ನು ಸುತ್ತಿಸಿ, ಅರೆಗಳಿಗೆ ಕೈ ಮುಗಿದು, ಕಣ್ಮುಚ್ಚಿ ಕೂರುವುದನ್ನು ತಪ್ಪಿಸುತ್ತಿರಲಿಲ್ಲ ನಕುಲ. ರಜಾದಿನಗಳಲ್ಲಿ ಪೂಜೆ